

ಮಾತು-ಕತೆ

# ಜನರ ಕಷ್ಟ ಸುಖಗಳೊಂದಿಗೆ ನಾನು ಬೆರೆತು ಹೋಗಿರುವೆ...

## ವಿಜಯಾ ಅವರೊಂದಿಗೆ ಒಂದು ಆಪ್ತಸಂವಾದ

ಸಂದರ್ಶನ: **ಡಾ. ಎಂ.ಎಸ್. ಆಶಾದೇವಿ**

ಚಿತ್ರಗಳು: ಪ್ರಶಾಂತ್ ಎಚ್.ಜಿ.

ಕರ್ನಾಟಕದ ಸಾಮಾಜಿಕ–ಸಾಂಸ್ಕೃತಿಕ ಕ್ಷೇತ್ರದ ಅಚ್ಚಳಿಯದ ಮಹಿಳಾ ದನಿಗಳಲ್ಲಿ ವಿಜಯಾ ಅವರದೂ ಒಂದು. ಒಡನಾಡಿಗಳಿಂದ 'ವಿಜಯಮ್ಮ' ಎಂದು ಕರೆಸಿಕೊಳ್ಳುವ ವಿಜಯಾ ನಾಡಿನ ಬಹುತೇಕ ಜನಪರ ಚಳವಳಿ, ಸಂಘಟನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವರು. ಪತ್ರಕರ್ತೆಯಾಗಿ, ಲೇಖಕಿಯಾಗಿ ಅವರ ಬರವಣಿಗೆಯ ಹರಹು ವಿಸ್ತಾರವಾದುದು. ಬಹುಮುಖಿ ವ್ಯಕ್ತಿತ್ವದ ವಿಜಯಾ ಅವರ ಹೋರಾಟದ ಬದುಕು ಮತ್ತು ವ್ಯಕ್ತಿತ್ವ ನಾಡಿನ ವಿವಿಧ ತಲೆಮಾರುಗಳಿಗೆ ಸ್ಫೂರ್ತಿದಾಯಕ. ವಿಶೇಷವಾಗಿ, ಹೆಣ್ಣುಮಕ್ಕಳ ಆತ್ಮವಿಶ್ವಾಸಕ್ಕೆ ಅಂತರ್ಜಲದಂತೆ ಪ್ರೇರಣಾದಾಯಕ. ವಿಜಯಾ ಅವರೊಂದಿಗಿನ ಈ ಸಂದರ್ಶನ ಆಧುನಿಕ ಕರ್ನಾಟಕದ ಆರೇಳು ದಶಕಗಳ ವಿದ್ಯಮಾನಗಳ ಇಣುಕುನೋಟವೂ ಹೌದು.